ನಿರಾಶ್ರಿತರಿಗೆ ಶಿವಮೊಗ್ಗ ತಾಲ್ಲೂಕು ನಿದಿಗೆ ಹೋಬಳಿ, ನಿದಿಗೆ–ಮಾಚೇನಹಳ್ಳಿ ಗ್ರಾಮದಲ್ಲಿ ಪುನರ್ವಸತಿ ಕೇಂದ್ರ ನಿರ್ಮಿಸಲಾಗಿದೆ.

ಆ) ತುಂಗಾ ಮೇಲ್ದಂಡೆ ಯೋಜನೆ ಹಿನ್ನೀರಿನಿಂದ ಭಾದಿತವಾಗಿರುವ ಸಂತ್ರಸ್ಥರಿಗೆ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಸೌಲಭ್ಯಗಳನ್ನು ಒದಗಿಸಲು ಸರ್ಕಾರದ ಆದೇಶ ಸಂಖ್ಯೆ/ಕಂ.ಇ. 113 ಆರ್.ಇ.ಹೆಚ್. 2003 ಬೆಂಗಳೂರು. ದಿನಾಂಕ: 01–12–2006ರಲ್ಲಿ ರೂ. 20.47 ಕೋಟಿಗಳ ಪ್ಯಾಕೇಜಿಗೆ ಅನುಮೋದನೆ ನೀಡಲಾಗಿದೆ. ಈ ಪ್ಯಾಕೇಜಿನಡಿ ಪುನರ್ವಸತಿ ಕೇಂದ್ರದಲ್ಲಿ ಮೂಲ ಸೌಲಭ್ಯಗಳಾದ ಶಾಲೆ, ಬಸ್ಸು ತಂಗುದಾಣ, ಲೈಬ್ರರಿ, ಸಮುದಾಯ ಭವನ, ಉದ್ಯಾನವನ, ವಾಣಿಜ್ಯ ಮಳಿಗೆ, ಧಾರ್ಮಿಕ ಕೇಂದ್ರಗಳನ್ನು ನಿರ್ಮಿಸಲು ರೂ. 38.00 ಲಕ್ಷಗಳಿಗೆ ಅವಕಾಶ ಕಲ್ಪಿಸಲಾಗಿದೆ, ಈ ಪೈಕಿ ಪುನರ್ವಸತಿ ಕೇಂದ್ರದಲ್ಲಿ ಮೂಲಭೂತ ಸೌಲಭ್ಯಗಳಾದ, ರಸ್ತೆ ಚರಂಡಿ, ಕುಡಿಯುವ ನೀರು, ಬೀದಿದೀಪಗಳನ್ನು ಈಗಾಗಲೇ ಅಳವಡಿಸಲಾಗಿದೆ.

ಇ) ಇತರೆ ನಾಗರೀಕ ಸೌಲಭ್ಯಗಳಾದ, ಉದ್ಯಾನವನ, ಸಮುದಾಯ ಭವನ, ದೇವಸ್ಥಾನ, ಶಾಲೆ, ಲೈಬ್ರರಿ, ಬಸ್ಸು ತಂಗುದಾಣ, ವಾಣಿಜ್ಯ ಮಳಿಗೆಗಳಿಗೆ ಸ್ಥಳಾವಕಾಶ ಕಲ್ಪಿಸಲಾಗಿದ್ದು, ಸಂತ್ರಸ್ಥರು ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಗೊಂಡ ಬಳಿಕ ಮೇಲಿನ ಸೌಲಭ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು.

ಕಾಡಾನೆ ಹಾವಳಿ

369 (843) ಶ್ರೀ ಕುಮಾರ ಸ್ವಾಮಿ ಹೆಚ್.ಕೆ. (ಸಕಲೇಶಪುರ) :– ಅರಣ್ಯ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಹಾಸನ ಜಿಲ್ಲೆಯ ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಆನೆಗಳ ಹಾವಳಿ ಮಿತಿಮೀರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಆನೆಗಳ ಹಾವಳಿಯನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಆನೆಗಳ ಹಾವಳಿಯನ್ನು ತಡೆಗಟ್ಟಲು ಮತ್ತು ಆನೆಗಳನ್ನು ಸ್ಥಳಾಂತರಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ? (ಪೂರ್ಣ ಮಾಹಿತಿ ನೀಡುವುದು)

ಶ್ರೀ ಸಿ.ಪಿ. ಯೋಗೇಶ್ವರ (ಅರಣ್ಯ ಸಚಿವರು):–

ಅ) ಹೌದು

ಆ) ಹಾಸನ ಜಿಲ್ಲೆ ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಲ್ಲಿ ಕಾಡಾನೆಗಳ ಹಾವಳಿ ನಿಯಂತ್ರಣಕ್ಕಾಗಿ ಇಲಾಖೆಯು ಈ ಕೆಳಕಂಡ ನಿಯಂತ್ರಣ ಕಾಮಗಾರಿಗಳನ್ನು ಕೈಗೊಂಡಿರುತ್ತದೆ:–

ಕಾಡಾನೆಗಳು ಅರಣ್ಯ ಪ್ರದೇಶದಿಂದ ಪಕ್ಕದ ಕೃಷಿ ಹಾಗೂ ಸಾರ್ವಜನಿಕರ ವಸಾಹತುಗಳಿಗೆ ದಾಳಿಮಾಡುವುದನ್ನು ತಡೆಗಟ್ಟುವ ಸಲುವಾಗಿ ಸೂಕ್ಷ್ಮ ಪ್ರದೇಶಗಳ ಅರಣ್ಯದ ಅಂಚಿನಲ್ಲಿ ಕಾಡಾನೆ ನಿರೋಧಕ ಕಂದಕಗಳನ್ನು ನಿರ್ಮಿಸಿ ಕಾಡಾನೆಗಳ ಹಾವಳಿಯನ್ನು ನಿಯಂತ್ರಿಸಲಾಗುತ್ತಿದೆ.

ಕಾಡಾನೆಗಳು ಪದೇ ಪದೇ ಕೃಷಿ ಜಮೀನುಗಳಿಗೆ ದಾಳಿ ಮಾಡುವ ಸೂಕ್ಷ್ಮ ಸ್ಥಳಗಳನ್ನು ಗುರುತಿಸಿ ಹಾವಳಿ ನಡೆಸುವ ಕಾಡಾನೆಗಳನ್ನು ಪುನಃ ಕಾಡಿಗೆ ಓಡಿಸುವ ಸಲುವಾಗಿ ಕಾಡಾನೆ ತಡೆ ಕ್ಯಾಂಪುಗಳನ್ನು ಸ್ಥಾಪಿಸಿ ಪ್ರತಿಯೊಂದು ಕ್ಯಾಂಪಿನಲ್ಲೂ ನಾಲ್ಕು ಮಂದಿ ನುರಿತ ಸಿಬ್ಬಂದಿಗಳನ್ನು ನಿಯೋಜಿಸಿ ಅವರುಗಳಿಗೆ ವಾಕೀಟಾಕಿಗಳನ್ನು ಹಾಗೂ ವಾಹನಗಳ ಸೌಲಭ್ಯಗಳನ್ನು ಒದಗಿಸಲಾಗಿದೆ.

ಕಾಡಾನೆ ತಡೆ ಕ್ಯಾಂಪುಗಳಿಗೆ ಪಟಾಕಿ ಇನ್ನಿತರ ಸಾಮಗ್ರಿಗಳನ್ನು ನೀಡಿ ಹಾವಳಿ ನಡೆಸುವ ಕಾಡಾನೆಗಳನ್ನು ಅರಣ್ಯ ಪ್ರದೇಶಗಳಿಗೆ ಹಿಮ್ಮೆಟ್ಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಒಟ್ಟು 9.50 ಕಿ.ಮೀ. ಸೋಲಾರ್ ಬೇಲಿ ನಿರ್ಮಿಸಲಾಗಿದೆ ಹಾಗು 6 ಕಿ.ಮೀ. ಉದ್ದದ ಆನೆ ನಿರೋಧಕ ಕಂದಕ ನಿರ್ಮಿಸಲಾಗಿದೆ.

ಮಾನವ ಹತ್ಯೆಯನ್ನು ಮಾಡಿ ಉದ್ವಿಗ್ನ ಸ್ಥಿತಿಯನ್ನುಂಟು ಮಾಡಿದ ಪುಂಡ ಕಾಡಾನೆಗಳನ್ನು ಗುರುತಿಸಿ ಸಕಲೇಶಪುರ ಮತ್ತು ಆಲೂರು ತಾಲ್ಲೂಕುಗಳಲ್ಲಿ 2005–06ನೇ ಸಾಲಿನಲ್ಲಿ 2, 2006–07ನೇ ಸಾಲಿನಲ್ಲಿ 1, 2007–08ನೇ ಸಾಲಿನಲ್ಲಿ 3, 2008–09ರಲ್ಲಿ 02 ಹಾಗೂ 2010–11 ರಲ್ಲಿ 3. ಹೀಗೆ ಒಟ್ಟು 11 ಕಾಡಾನೆಗಳನ್ನು ಹಿಡಿದು ಸ್ಥಳಾಂತರಿಸಲಾಗಿರುತ್ತದೆ.

ಇ) ಕಾಡಾನೆಗಳ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟಲ ತಜ್ಞರ ವರದಿಯಂತೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಿ, ಕೇಂದ್ರ ಸರ್ಕಾರವು ಅನುಮತಿ ನೀಡಿರುವಂತೆ ಎಲ್ಲಾ 25

ಕಾಡಾನೆಗಳನ್ನು ಸೆರೆಹಿಡಿದು ಸ್ಥಳಾಂತರಿಸಲು ಕೇಂದ್ರ ಸರ್ಕಾರವು ದಿನಾಂಕ: 11–11–2011 ರಂದು ಕೆಲವು ನಿಬಂಧನೆಗಳೊಂದಿಗೆ ಅನುಮತಿ ನೀಡಿರುತ್ತದೆ. ಈ ಕ್ರಮಕ್ಕೆ ರಾಜ್ಯ ಉಚ್ಚ ನ್ಯಾಯಾಲಯ ರಿಟ್ ಅರ್ಜಿ ಸಂಖ್ಯೆ: 14029/2008ಕ್ಕೆ ಸಂಬಂಧಿಸಿದಂತೆ ದಿನಾಂಕ: 16–11–2011ರಲ್ಲಿ ಸದರಿ ಆನೆಗಳನ್ನು ಸ್ಥಳಾಂತರಿಸುವ ಮುನ್ನ ತಜ್ಞರು ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳ ಅಭಿಪ್ರಾಯ ಪಡೆದ ನಂತರ ಸ್ಥಳಾಂತರಿಸಲು ನಿರ್ದೇಶನ ನೀಡಿರುತ್ತದೆ. ಹಾಗೆಯೇ ನ್ಯಾಯಾಲಯವು ಕೇಂದ್ರ ಸರ್ಕಾರಕ್ಕೆ ಇದನ್ನು ಗಂಭೀರವಾಗಿ ಪರಿಗಣಿಸಲು ಹಾಗೂ ಆಫ್ರಿಕಾ ಮತ್ತು ಏಷ್ಯ ಖಂಡಗಳ ನುರಿತ ತಜ್ಞರನ್ನು ಒಳಗೊಂಡ ತಂಡದೊಂದಿಗೆ ವಿಮರ್ಶಿಸಿದ ನಂತರವೇ ಸ್ಥಳಾಂತರಿಸಲು ನಿರ್ದೇಶನ ನೀಡಿರುತ್ತದೆ. ಇದನ್ನೇ ಪುನರುಚ್ಚರಿಸಿ ಈ ಕಛೇರಿಯಿಂದ ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ ಹಾಗೂ ನಿರ್ದೇಶಕರು (ಆನೆಯೋಜನೆ), ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯ, ನವದೆಹಲಿ ಇವರಿಗೆ ದಿನಾಂಕ: 29–11–2011 ರಂದು ಸೂಕ್ತ ಕ್ರಮ ಜರುಗಿಸಲು ಕೋರಲಾಗಿತ್ತು.

ಕೇಂದ್ರ ಸರ್ಕಾರವು ಪ್ರಸ್ತಾಪಿಸಿರುವಂತೆ ಮಾನ್ಯ ಉಚ್ಚನ್ಯಾಯಾಲಯವು ದಿನಾಂಕ: 24–01–2012 ರಂದು ಮಾನವ ಆನೆ ಸಂಘರ್ಷವನ್ನು ತಡೆಗಟ್ಟಲು ನುರಿತ ತಜ್ಞರನ್ನೊಳಗೊಂಡ ಕಾರ್ಯಪಡೆಯನ್ನು ರಚಿಸಿ ದಿನಾಂಕ: 15–04–2012 ರೊಳಗೆ ವರದಿ ಸಲ್ಲಿಸಲು ತಿಳಿಸಿ ತೀರ್ಪು ನೀಡಿರುತ್ತದೆ. ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಸಹಾಯಧನ

370 (844) ಶ್ರೀ ಕುಮಾರ ಸ್ವಾಮಿ ಹೆಚ್.ಕೆ. (ಸಕಲೇಶಪುರ) :– ಸಣ್ಣ ಕೈಗಾರಿಕೆ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸರ್ಕಾರದಿಂದ ಸಹಾಯಧನ ನೀಡಲಾಗುತ್ತಿದೆಯೇ; ಹಾಗಿದ್ದಲ್ಲಿ, ಕಳೆದ 4–5 ವರ್ಷಗಳಿಂದ ಸಹಾಯಧನ ನೀಡದೆ ಇರುವುದಕ್ಕೆ ಕಾರಣವೇನು; (ಮಾಹಿತಿ ನೀಡುವುದು)

ಆ) ಹಾಗಿದ್ದಲ್ಲಿ, ಸಹಾಯಧನ ನೀಡದಿರುವುದರಿಂದ ಬ್ಯಾಂಕಿನಿಂದ ಸಾಲ ಪಡೆದ ಉದ್ಯಮಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;